



# ಮಾರ್ಗರೆಟ್ ಅಟ್‌ವುಡ್ ಅವರ ‘ದ ಟೆಸ್ಟಮಂಟ್’: ಕಲ್ಪಿತ ರಾಷ್ಟ್ರದ ಪತನ

ಕೆನಡಾ ಮೂಲದ ಲೇಖಕಿ ಮಾರ್ಗರೆಟ್ ಅಟ್‌ವುಡ್ ಕಾದಂಬರಿ ‘ದ ಟೆಸ್ಟಮಂಟ್’ ಬರ್ನಾರ್ಡಿನ್ ಇವರಿಸ್ಟೊ ಅವರ ‘ಗರ್ಲ್, ವುಮನ್, ಅದರ್’ ಎದುರು ಸ್ಪರ್ಧಿಸಬೇಕಾಯಿತು ಎನ್ನುವುದನ್ನು ನೆನೆದರೆ ಈ ಕಾದಂಬರಿಯ ಮಹತ್ವ ಅರ್ಥವಾಗಬಹುದು. ಹಾಗಿದ್ದೂ ಈ ಕಾದಂಬರಿ ಅಷ್ಟೇನೂ ತೀವ್ರ ಸ್ಪಂದನವುಳ್ಳ ಕೃತಿ ಎನಿಸುವುದಿಲ್ಲ. ಭಾವನಾತ್ಮಕವಾಗಿ ‘ವಾಸ್ತವ’ವನ್ನು ಕಟ್ಟಿಕೊಡುವಲ್ಲೇ ಹೆಚ್ಚು ಕೇಂದ್ರೀಕೃತಗೊಂಡ ಕೃತಿಯಿದು. ಆದರೆ ಈ ವಾಸ್ತವವಾದರೂ ಯಾವುದು? ಹದಿನೈದು ವರ್ಷಗಳಷ್ಟು ಹಿಂದೆ ಬಂದ ‘ಟೇಲ್ ಆಫ್ ಹ್ಯಾಂಡ್‌ಮೇಡ್ಸ್’ನ ಮುಂದುವರಿದ ಭಾಗವಾದ ಈ ಕೃತಿ ಅಟ್‌ವುಡ್ ಅವರದೇ ಕಾಲ್ಪನಿಕ ಸೃಷ್ಟಿಯಾದ ಅಮೆರಿಕದ ಗಿಲಿಯಾಡ್ಸ್‌ನ ‘ವಾಸ್ತವ’ವನ್ನು ವಿವರ ವಿವರವಾಗಿ ಕಟ್ಟಿಕೊಡುತ್ತಿದೆ ಎನ್ನುವುದನ್ನು ಮರೆಯುವಂತಿಲ್ಲ.

1985ರಲ್ಲಿ ಮೊದಲ ಬಾರಿ ಕಾಲ್ಪನಿಕ ಸೃಷ್ಟಿ ಗಿಲಿಯಾಡ್ಸ್ ಸುದ್ದಿ–ಸದ್ದು ಮಾಡಿದಾಗ ಹುಟ್ಟಿದ ತಲ್ಲಣಗಳು ಮುಂದೆ ಬರಲಿರುವ ದಿನಗಳ ಬಗ್ಗೆ ಕೊಟ್ಟ ಎಚ್ಚರಿಕೆಯ ಕರೆಯಾಗಿತ್ತು ಎಂದು ಇವತ್ತು, ಮೂವತ್ತೈದು ವರ್ಷಗಳ ಬಳಿಕ ಪರಿಗಣಿಸುವ ಮಂದಿಗೆ ಇದೊಂದು ಮಹತ್ವದ ಕಾದಂಬರಿ. ಕ್ರಿಶ್ಚಿಯನ್ ಮೂಲಭೂತವಾದಿಗಳು ಅಧಿಕಾರ ಕೇಂದ್ರವನ್ನು ತಮ್ಮ ಕೈವಶ